# <u>ಸುವರ್ಣ ಗ್ರಾಮೋದಯ 5ನೇ ಹಂತದ ಯೋಜನೆ</u>

ಸುವರ್ಣ ಗ್ರಾಮೋದಯ ಯೋಜನೆಯು ಕರ್ನಾಟಕ ಸರ್ಕಾರದ ಒಂದು ವಿನೂತನ ಯೋಜನೆಯಾಗಿದ್ದು, ಗ್ರಾಮೀಣ ಅಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರ ದೂರದೃಷ್ಟಿತ್ವವನ್ನು ಹೊಂದುವ ಮೂಲಕ ಬಲಿಷ್ಠ ಗ್ರಾಮ ಸಮುದಾಯಗಳನ್ನು ಅಭಿವೃದ್ಧಿಪಡಿಸುವುದಾಗಿದೆ.

ಇದರ ಯಶಸ್ಸನ್ನು ಕಂಡ ಸರ್ಕಾರವು 2012-13ನೇ ಸಾಲಿನಿಂದ ರಾಜ್ಯಾದ್ಯಂತ ಜಾರಿಗೆ ಬರುವಂತೆ 5ನೇ ಹಂತದ ಯೋಜನೆಯನ್ನು **ರೂ.1000 ಕೋಟಿಗಳ** ಅನುದಾನದಲ್ಲಿ ಆರಂಭಿಸಲಾಗಿದೆ. ಈ ಯೋಜನೆಗೆ ಈಗಾಗಲೇ ಗ್ರಾಮಗಳ ಆಯ್ಕೆ ಪ್ರಕ್ರಿಯೆಯು ಸಂಪೂರ್ಣಗೊಂಡಿರುತ್ತದೆ. ಈ ಸಾಲಿನಲ್ಲಿ **ರೂ.449 ಕೋಟಿಗಳ** ಅನುದಾನವನ್ನು ಹಂಚಿಕೆಯನ್ನು ಮಾಡಲಾಗಿದೆ. ಅನುದಾನವನ್ನು ಈ ಕೆಳಗಿನ ಲೆಕ್ಕಶೀರ್ಷಿಕೆಯಲ್ಲಿ ನಗದೀಕರಿಸಲು ಅವಕಾಶ ಕಲ್ಪಿಸಿದೆ.

**ಲೆಕ್ಕ ಶೀರ್ಷಿಕೆ:**

1. 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು
2. 4215-02-800-0-02-422 (ಯೋಜನೆ) ವಿಶೇಷ ಘಟಕ ಯೋಜನೆ
3. 4215-02-800-0-02-423 (ಯೋಜನೆ) ಗಿರಿಜನ ಉಪ ಯೋಜನೆ

# ಅನುದಾನ ಬಿಡುಗಡೆ

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳಲ್ಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2012–13ನೇ ಸಾಲಿನಲ್ಲಿ 1ನೇ ಕಂತಿನ ಅನುದಾನ ಬಿಡುಗಡೆ ಕುರಿತು.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:150:ಆರ್.ಆರ್.ಸಿ.2006, ದಿ:07.10.2006.
2. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:13/ಆಂ.ಆ.ಸ./2012, ಬೆಂಗಳೂರು, ದಿ:02.04.2012

ಪ್ರಸ್ತಾವನೆ:

ಉಲ್ಲೇಖ(2)ರ ಆದೇಶದಲ್ಲಿ ಸುವರ್ಣ ಗ್ರಾಮೋದಯ ಯೋಜನೆಯನ್ನು 2012–13ನೇ ಸಾಲಿನಲ್ಲಿ ಮುಂದುವರಿಸಲಾಗಿದೆ. ಈ ಯೋಜನೆಗಾಗಿ 2012–13ನೇ ಸಾಲಿನ ಆಯವ್ಯಯದಲ್ಲಿ **₹ 34913.98** ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಈ ಪೈಕಿ ಬಂಡವಾಳ ವೆಚ್ಚಗಳು, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಲೆಕ್ಕ ಶೀರ್ಷಿಕೆಯಡಿ ಕ್ರಮವಾಗಿ **₹ 21809.96, ₹ 8200.01** ಮತ್ತು **₹ 4904.01** ಲಕ್ಷಗಳು ನಿಗದಿಯಾಗಿರುತ್ತದೆ. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಜಿಲ್ಲೆಗಳಿಗೆ/ಗ್ರಾಮಗಳಿಗೆ ಹಂಚಿಕೆಯಾಗಿರುವ ಅನುದಾನದಲ್ಲಿ ಆಯಾ ಲೆಕ್ಕ ಶೀರ್ಷಿಕೆಯಡಿ ಕಡ್ಡಾಯವಾಗಿ ಭರಿಸತಕ್ಕದ್ದು. ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮಗಳ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಎಲ್ಲಾ ಜಿಲ್ಲೆಗಳಿಗೆ ಅನದಾನ ಬಿಡುಗಡೆ ಅಗತ್ಯವಿರುತ್ತದೆ. ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:109:ಸುಗ್ರಾಯೋ:2012–13, ಬೆಂಗಳೂರು, ದಿನಾಂಕ:27.11.2012**

ಮೇಲಿನ ಪ್ರಸ್ತಾವನೆಯಂತೆ ಸುವರ್ಣ ಗ್ರಾಮೋದಯ ಯೋಜನೆ ಅನುಷ್ಠಾನಕ್ಕಾಗಿ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ **₹ 17456.99** ಲಕ್ಷಗಳನ್ನು (ರೂಪಾಯಿ ಹದಿನೇಳು ಸಾವಿರದ ನಾಲ್ಕು ನೂರ ಐವತ್ತಾರು ಲಕ್ಷ ತೊಂಭತ್ತೊಂಭತ್ತು ಸಾವಿರಗಳು ಮಾತ್ರ) ಅನುಬಂಧದಲ್ಲಿ ವಿವರಿಸಲಾದಂತೆ ರಾಜ್ಯ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಭರಿಸತಕ್ಕದ್ದು.

1. 4215–02–800–0–02–132 (ಯೋಜನೆ) ಬಂಡವಾಳ ವೆಚ್ಚಗಳು – ₹ 10903.97 ಲಕ್ಷಗಳು
2. 4215–02–800–0–02–422 (ಯೋಜನೆ) ವಿಶೇಷ ಘಟಕ ಯೋಜನೆ – ₹ 4100.51 ಲಕ್ಷಗಳು
3. 4215–02–800–0–02–423 (ಯೋಜನೆ) ಗಿರಿಜನ ಉಪ ಯೋಜನೆ – ₹ 2452.51 ಲಕ್ಷಗಳು

**ಒಟ್ಟು – ₹ 17456.99 ಲಕ್ಷಗಳು**

ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳ ಅನುಮೋದಿತ ಗ್ರಾಮಾಭಿವೃದ್ಧಿ ಯೋಜನೆಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮಾತ್ರ ವಿನಿಯೋಗಿಸುವುದು.

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಜಿಲ್ಲೆಗಳಿಗೆ/ಗ್ರಾಮಗಳಿಗೆ ಹಂಚಿಕೆಯಾಗಿರುವ ಅನುದಾನದಲ್ಲಿ ಆಯಾ ಲೆಕ್ಕ ಶೀರ್ಷಿಕೆಯಡಿ ಕಡ್ಡಾಯವಾಗಿ ಭರಿಸತಕ್ಕದ್ದು. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಪ್ರತ್ಯೇಕವಾಗಿ ಪ್ರತಿ ಮಾಹೆ ಸರ್ಕಾರಕ್ಕೆ ಸಲ್ಲಿಸುವುದು.

ಈ ಅನುದಾನ ಬಿಡುಗಡೆ ಬಗ್ಗೆ ಸರ್ಕಾರದ ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ:ಆಇ:432:ವೆಚ್ಚ–06/2012, ದಿನಾಂಕ:17.11.2012ರಲ್ಲಿ ಪಡೆದು ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಬೂವನಹಳ್ಳಿ ನಾಗರಾಜ್

ನಿರ್ದೇಶಕರು(ಸು.ಗ್ರಾ.ಯೋ.) ಹಾಗೂ
ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಗಳು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು.
2. ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲೆಗಳು.
3. ಮಹಾಲೇಖಪಾಲರು, ಬೆಂಗಳೂರು.
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಉಪನಿರ್ದೇಶಕರು, ಖಜಾನೆ ಗಣಕ ಮಾಹಿತಿ ಜಾಲ, ಖನಿಜ ಭವನ, ಬೆಂಗಳೂರು.
6. ಖಜಾನೆಗಳ ಉಪ ನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
7. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ.& ಪಂ.ರಾಜ್ ಇಲಾಖೆ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
11. ಸರ್ಕಾರದ ಉಪಕಾರ್ಯದರ್ಶಿ(ಆಡಳಿತ) ಗ್ರಾ.ಆ.ಮತ್ತು ಪಂ.ರಾಜ್ ಇಲಾಖೆ, ಕಂಪ್ಯೂಟರ್ ಸೇಲ್, ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
12. ರಕ್ಷ ಕಡತಕ್ಕೆ/ಹೆಚ್ಚುವರಿ ಪ್ರತಿ.

**ಅನುಬಂಧ**

**2012–13 ನೇ ಸಾಲಿನ ಸುವರ್ಣ ಗ್ರಾಮೋದಯ ಯೋಜನೆಯ ಅನುದಾನ ಬಿಡುಗಡೆ**

**ಸರ್ಕಾರ ಆದೇಶ ಸಂಖ್ಯೆ:ಗ್ರಾಅಪ:109:ಸುಗ್ರಾಯೋ:2012–13, ದಿನಾಂಕ:27.11.2012**

| ಕ್ರ.ಸಂ. | ಜಿಲ್ಲೆ | ಬಂಡವಾಳ ವೆಚ್ಚ | SCP | TSP | ಒಟ್ಟು |
|---|---|---|---|---|---|
| 1 | ಬಾಗಲಕೋಟೆ | 301.86 | 113.49 | 67.87 | 483.22 |
| 2 | ಬೆಂಗಳೂರು(ನ) | 187.2 | 70.39 | 42.10 | 299.69 |
| 3 | ಬೆಂಗಳೂರು(ಗ್ರಾ) | 159.43 | 59.95 | 35.85 | 255.23 |
| 4 | ಬೆಳಗಾವಿ | 274.32 | 304.10 | 181.87 | 760.29 |
| 5 | ಬಳ್ಳಾರಿ | 853.91 | 247.86 | 148.23 | 1250.00 |
| 6 | ಬೀದರ್ | 1018.98 | 238.43 | 142.59 | 1400.00 |
| 7 | ಬಿಜಾಪುರ | 170.39 | 144.81 | 86.6 | 401.80 |
| 8 | ಚಿಕ್ಕಬಳ್ಳಾಪುರ | 587.62 | 89.24 | 53.37 | 730.23 |
| 9 | ಚಾಮರಾಜನಗರ | 215.87 | 81.16 | 48.54 | 345.57 |
| 10 | ಚಿಕ್ಕಮಗಳೂರು | 41.12 | 98.83 | 59.11 | 199.06 |
| 11 | ಚಿತ್ರದುರ್ಗ | 87.04 | 120.90 | 72.31 | 280.25 |
| 12 | ದ.ಕನ್ನಡ | 222.7 | 104.40 | 62.44 | 389.54 |
| 13 | ದಾವಣಗೆರೆ | 46.65 | 128.31 | 76.74 | 251.70 |
| 14 | ಧಾರವಾಡ | 178.24 | 67.02 | 40.08 | 285.34 |
| 15 | ಗದಗ | 156.56 | 58.87 | 35.21 | 250.64 |
| 16 | ಗುಲ್ಬರ್ಗಾ | 905.87 | 301.07 | 180.06 | 1387.00 |
| 17 | ಯಾದಗೀರ್ | 790.6 | 162.32 | 97.08 | 1050.00 |
| 18 | ಹಾಸನ | 355.59 | 133.70 | 79.96 | 569.25 |
| 19 | ಹಾವೇರಿ | 41.49 | 109.79 | 65.66 | 216.94 |
| 20 | ಕೊಡಗು | 111.96 | 42.10 | 25.18 | 179.24 |
| 21 | ಕೋಲಾರ | 245.42 | 92.28 | 55.19 | 392.89 |
| 22 | ಕೊಪ್ಪಳ | 772.7 | 207.94 | 124.36 | 1105.00 |
| 23 | ಮಂಡ್ಯ | 375.29 | 141.11 | 84.39 | 600.79 |
| 24 | ಮೈಸೂರು | 423.67 | 159.29 | 95.27 | 678.23 |
| 25 | ರಾಮನಗರ | 222.13 | 83.52 | 49.95 | 355.60 |
| 26 | ರಾಯಚೂರು | 843.14 | 254.60 | 152.26 | 1250.00 |
| 27 | ಶಿವಮೊಗ್ಗ | 196.01 | 98.00 | 58.61 | 352.62 |
| 28 | ತುಮಕೂರು | 563.4 | 211.83 | 126.68 | 901.91 |
| 29 | ಉ.ಕನ್ನಡ | 277.75 | 93.62 | 55.99 | 427.36 |
| 30 | ಉಡುಪಿ | 277.90 | 81.16 | 48.54 | 407.60 |
| | **ಒಟ್ಟು** | **10903.97** | **4100.51** | **2452.51** | **17456.99** |